ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 5, November - December 2024, Pp. 132-139
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹೆಗ್ಗಡದೇವನಕೋಟೆ ತಾಲೂಕಿನ ಶಾಸನಗಳಲ್ಲಿ ನೈತಿಕ ಮೌಲ್ಯಗಳು

**ಮಹೇಶ್ ಕುಮಾರ್ ಕೆ.ಎಸ್**

ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***

*ಪ್ರತಿಯೊಂದು ಸಂಸ್ಕೃತಿ, ಧರ್ಮ ಮತ್ತು ಸಮಾಜವು ಅದರದೇ ಆದ ನೈತಿಕ ಮೌಲ್ಯಗಳನ್ನು ಹೊಂದಿರುತ್ತದೆ. ನೈತಿಕ ಮೌಲ್ಯಗಳು ಸಮಂಜಸತೆ, ಕಾಳಜಿ ಮತ್ತು ಬೆಂಬಲದ ಅರ್ಥವನ್ನು ಅಭಿವೃದ್ಧಿಪಡಿಸುತ್ತವೆ. ಇದು ವ್ಯಕ್ತಿಯ ವ್ಯಕ್ತಿತ್ವ, ಸಾಮಾಜಿಕ ಚಿತ್ರಣ ಮತ್ತು ಮನಸ್ಸಿನ ಶಾಂತಿಯನ್ನು ಸುಧಾರಿಸಲು ಸಹ ಕೊಡುಗೆ ನೀಡುತ್ತವೆ. ನೈತಿಕ ಮೌಲ್ಯಗಳು ವ್ಯಕ್ತಿಯನ್ನು ಅವರ ಜೀವನ ಪಥದಲ್ಲಿ ನಿರ್ದೇಶಿಸುತ್ತವೆ. ನಾವು ಅನೇಕ ಸಂದರ್ಭಗಳಲ್ಲಿ ಮೌಲ್ಯಗಳನ್ನು ಕುರಿತು ಮಾತನಾಡುತ್ತೇವೆ. ನಮ್ಮ ಜೀವನ, ಸಮಾಜ, ಅರ್ಥವ್ಯವಸ್ಥೆ, ರಾಜಕಾರಣ ಮುಂತಾದವುಗಳೆಲ್ಲವೂ ಮೌಲ್ಯಾಧಾರಿತವಾಗಿರಬೇಕೆಂದು ಬಯಸುತ್ತೇವೆ. ಮೌಲ್ಯಗಳು ಮನುಷ್ಯನ ಬದುಕಿಗೆ, ಅವುಗಳಿಗಿರುವ ವ್ಯವಸ್ಥೆಗೆ ಮೆರಗನ್ನುಂಟು ಮಾಡುವುದೇ ಇದಕ್ಕೆಲ್ಲ ಮೂಲ ಕಾರಣವೆನ್ನಬಹುದು. ಈ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡ ಮನುಷ್ಯನ ವ್ಯಕ್ತಿತ್ವವು ಸಂಪೂರ್ಣವಾಗಿ ವಿಕಾಸಗೊಳ್ಳುತ್ತದೆ. ಮನುಷ್ಯನ ಉದಾತ್ತ ಗುರಿಯನ್ನು ಸಾಧಿಸುವಲ್ಲಿ ಮೌಲ್ಯಗಳು ಅತ್ಯಂತ ಸಹಾಯಕವಾಗುವುದರಿಂದ ಮಾನವ ಬದುಕಿನಲ್ಲಿ ಮೌಲ್ಯಗಳ ಪಾತ್ರ ಗಮನಾರ್ಹವಾಗಿದೆ. ಪ್ರಸ್ತುತ ಲೇಖನದಲ್ಲಿ ಹೆಗ್ಗಡದೇವನಕೋಟೆ ತಾಲೂಕಿನ ಶಾಸನಗಳಲ್ಲಿ ಕಂಡುಬರುವ ನೈತಿಕ ಮೌಲ್ಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ಕರ್ನಾಟಕ ಇತಿಹಾಸ, ಹೆಗ್ಗಡದೇವನಕೋಟೆ, ಶಾಸನಗಳು, ನೈತಿಕ ಮೌಲ್ಯಗಳು.*

## ಪೀಠಿಕೆ

ಪ್ರಾಚೀನ ಕಾಲದ ಸಮಾಜದಲ್ಲಿ ಜನರು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಅದಕ್ಕೆ ತಕ್ಕಂತೆ ಬದುಕುತ್ತಿದ್ದರು. ಈ ಮೌಲ್ಯಗಳಿಗೆ ಧಕ್ಕೆ ಬಂದಾಗ ಅವುಗಳನ್ನು ಉಳಿಸಿ ಕಾಪಾಡಲು ಪ್ರಾಣವನ್ನೇ ತ್ಯಾಗ ಮಾಡಿದ ಎಷ್ಟೋ ನಿದರ್ಶನಗಳು ಶಾಸನಗಳಿಂದ ತಿಳಿದುಬರುತ್ತವೆ. ಹೆಗ್ಗಡದೇವನಕೋಟೆ ತಾಲೂಕಿನ ಶಾಸನಗಳನ್ನು ಪರಿಶೀಲಿಸಿದಾಗಲೂ ಇಂತಹ ಘಟನೆಗಳು ನಡೆದಿರುವುದು ಸಾಬೀತಾಗುತ್ತದೆ. ತ್ಯಾಗ ಆ ಕಾಲದ ಪರಮ ಮೌಲ್ಯಗಳಲ್ಲಿ ಒಂದಾಗಿತ್ತು. ಸ್ತ್ರೀ–ಪುರುಷರಾಧಿಯಾಗಿ ಎಲ್ಲರೂ ಅಂದಿನ ಆದರ್ಶ ಮೌಲ್ಯಗಳ ರಕ್ಷಣೆಯಲ್ಲಿ ಮತ್ತು ಅವುಗಳ ಅನುಷ್ಠಾನದಲ್ಲಿ ಜೀವನವನ್ನು ತ್ಯಾಗ ಮಾಡಿದಾಗ ಜನತೆ ಮತ್ತು ಅಧಿಕಾರಿ ವರ್ಗ, ಅವರ ತ್ಯಾಗದ ಸಂಕೇತವಾಗಿ, ಅವರ ನೆನಪು ಶಾಶ್ವತವಾಗಿ ಉಳಿಯಬೇಕೆಂಬ ಸದುದ್ದೇಶದಿಂದ ಶಿಲೆಯ ಮೇಲೆ ಅವರ ರೂಪವನ್ನು, ಶೌರ್ಯ, ತ್ಯಾಗಗಳನ್ನು ವರ್ಣಿಸಿ, ಅವರು ಮಡಿದ ಕಾರಣಗಳನ್ನು ಉಬ್ಬುಶಿಲ್ಪಗಳ ಮೂಲಕ ಬಿಡಿಸಿ ಸ್ಮಾರಕಗಳನ್ನು

***Please cite this article as:*** ಮಹೇಶ್ ಕುಮಾರ್, ಕೆ.ಎಸ್. (2024). ಹೆಗ್ಗಡದೇವನಕೋಟೆ ತಾಲೂಕಿನ ಶಾಸನಗಳಲ್ಲಿ ನೈತಿಕ ಮೌಲ್ಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 3(5), 132–139

ನಿಲ್ಲಿಸುತ್ತಿದ್ದರು. ಅವುಗಳನ್ನು ವೀರಗಲ್ಲುಗಳು ಹಾಗೂ ಮಾಸ್ತಿಕಲ್ಲುಗಳೆಂದು ಕರೆಯುತ್ತಾರೆ.

ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಸಂಖ್ಯೆಯಲ್ಲಿ ಮಾತ್ರ ದಾನ ಶಾಸನಗಳಿಗಿಂತ ಕಡಿಮೆ. ಆದರೆ ಸ್ವಾರಸ್ಯದ ದೃಷ್ಟಿಯಿಂದ, ನಮ್ಮ ಮನಸ್ಸನ್ನು ಕರಗಿಸಿ ಭಾವವಿಷ್ಟರಾಗುವಂತೆ ಮಾಡುವುದರ ದೃಷ್ಟಿಯಿಂದ ಅವು ನಿಜವಾಗಿಯೂ ಅದ್ವಿತೀಯವೆಂದೇ ಹೇಳಬೇಕು. ವ್ಯಕ್ತಿಗಳು ತಮ್ಮ ಬಳಿ ಇರುವ ಐಶ್ವರ್ಯವನ್ನು ಯಾವುದೋ ಉದ್ದೇಶಕ್ಕಾಗಿ ತ್ಯಾಗ ಮಾಡುವುದನ್ನು ದಾನ ಶಾಸನಗಳು ಹೇಳಿದರೆ, ತಮ್ಮ ಐಶ್ವರ್ಯಕ್ಕಿಂತ ದೇಹ ಮತ್ತು ಪ್ರಾಣಗಳನ್ನು ಸ್ವಸಂತೋಷದಿಂದ ತ್ಯಾಗ ಮಾಡಿದವರ ವಿಷಯವನ್ನು ಹೇಳುವ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಬರಿಯ ದಾನ ಶಾಸನಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆ ಪಡೆಯುವುದರಲ್ಲಿ ಅಚ್ಚರಿಯಿಲ್ಲ. ಅದರಲ್ಲೂ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳಲ್ಲಿ ಮಾಸ್ತಿಕಲ್ಲುಗಳು ತಮ್ಮ ವಿಶೇಷ ಗಮನವನ್ನು ಸೆಳೆಯುತ್ತವೆ. ವೀರನೊಬ್ಬ ಯುದ್ಧದಲ್ಲಿ ಹೋರಾಡಿ ಸಾಯುವ ವಿಷಯವನ್ನು ವೀರಗಲ್ಲು ಹೇಳುತ್ತದೆ. ಹಾಗೆಯೇ ಗಂಡಸತ್ತ ಮೇಲೆ ಅವನ ಜೊತೆ ಅಗ್ನಿಪ್ರವೇಶ ಮಾಡಿದ ಸ್ತ್ರೀ ವಿಷಯವನ್ನು ಮಾಸ್ತಿಕಲ್ಲು ಹೇಳುತ್ತದೆ. ಇಲ್ಲಿ ಮಾಸ್ತಿಕಲ್ಲು ಏಕೆ ವೀರಗಲ್ಲಿಗಿಂತ ಹೆಚ್ಚು ಮನಸ್ಸನ್ನು ಕಲಕುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಸ್ತ್ರೀ ಯಾವುದೋ ನಂಬಿಕೆಗಾಗಿ, ಆದರ್ಶಕ್ಕಾಗಿ ತನ್ನನ್ನು ತಾನು ಕೊಂದುಕೊಳ್ಳುತ್ತಾಳೆ. ಇದು ಬರೀ ಆತ್ಮಹತ್ಯೆಯಲ್ಲ. ಹೋಲಿಕೆ ಮಾಡಿ ಹೇಳುವುದಾದರೆ ಯುದ್ಧದಲ್ಲಿ ಸಾಯುವುದು ಸುಲಭ; ಆದರೆ ಎಲ್ಲರ ಮುಂದೆ ತನ್ನನ್ನು ತಾನು ಕೊಂದುಕೊಳ್ಳುವುದು ಕಠಿಣ. ವೀರನಿಗಿಂತ ಹೆಚ್ಚಿನ ನಿಷ್ಠೆ, ಧೈರ್ಯ, ಆದರ್ಶಪ್ರಿಯತೆ, ಗಂಡೆದೆ ಆ ಹೆಣ್ಣಲ್ಲಿರಬೇಕಾಗುತ್ತದೆ.

ವೀರಗಲ್ಲು ಮತ್ತು ಮಾಸ್ತಿಕಲ್ಲುಗಳೆರಡೂ ಒಂದೇ ಬಗೆಯ ಸ್ಮಾರಕಗಳು, ವೀರ ತನ್ನ ರಾಜನಿಗಾಗಿ ರಣಾಂಗಣದಲ್ಲಿ ದುಡಿಯುತ್ತಾನೆ; ಸ್ತ್ರೀಯು ತನ್ನ ಆ ವೀರಪತಿಗಾಗಿ ಚಿತೆಯ ಮೇಲೆ ಮಡಿಯುತ್ತಾಳೆ. ಎರಡರ ಮೂಲದಲ್ಲಿಯೂ ಕೃತಜ್ಞತೆ, ಸ್ವಾಮಿನಿಷ್ಠೆ, ಅನುಪಮ ತ್ಯಾಗ ಇವೆ. ಅಂತಹ ವೀರ ಮತ್ತು ಮಹಾಸತಿಯರ ಬಗ್ಗೆ ಜನ ಮೆಚ್ಚುಗೆಯಿಂದ ಮತ್ತು ಭಕ್ತಿಯಿಂದ ಅವರ ಚಿತ್ರಗಳನ್ನು ಕಲ್ಲಿನಲ್ಲಿ ಕೆತ್ತಿಸಿ ಅವರ ವಿಷಯವನ್ನು ಆ ಕಲ್ಲಿನ ಮೇಲೆ ಬರೆಯಿಸಿದರು. ಅವರ ಹೆಸರು ಈ ಲೋಕದಲ್ಲಿ ಶಾಶ್ವತವಾಗಿ ಉಳಿಯಲೆಂದು ಹಾರೈಸಿದರು. ಅವರ ಅದ್ಭುತ ಕಾರ್ಯಗಳು ತಮಗೆ ಮತ್ತು ಮುಂದಿನ ತಲೆಮಾರುಗಳಿಗೆ ಚಿರಂತನ ಪ್ರಚೋದನೆಯನ್ನು ಕೊಡುತ್ತ, ತಾವು ನಂಬಿದ್ದ ಮೌಲ್ಯಗಳಿಗೆ ಅವರು ಸಂಕೇತವಾಗಿ ಮುಂದಿನ ಜನಕ್ಕೆ ಆ ಮೌಲ್ಯಗಳನ್ನು ಉದ್ದಕ್ಕೂ ಜ್ಞಾಪಿಸುತ್ತಿರಲೆಂದು ಅಪೇಕ್ಷಿಸಿದರು. ಯಾವುದೋ ಕಾಲದಲ್ಲಿ ಯಾರೋ ನಿಲ್ಲಿಸಿದ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳನ್ನು ಇಂದಿಗೂ ಎಷ್ಟೋ ಜನ ಪೂಜಿಸುತ್ತಿದ್ದಾರೆಂಬುದನ್ನು ನಾವು ಸ್ಮರಿಸಬೇಕು.

ಹೀಗೆ ತಮ್ಮ ಊರಿಗಾಗಿ, ನಾಡಿಗಾಗಿ ಒಡೆಯನಿಗಾಗಿ ಹೋರಾಡಿ ಮಡಿದ ವೀರರು; ಇಂತಹ ವೀರರ ಬೆಂಬಲವನ್ನು ಪಡೆವ ಸಾಮಂತರು; ಇವರೆಲ್ಲರಿಗೂ ಮಿಗಿಲಾದ ಚಕ್ರವರ್ತಿಗಳು; ಇವರ ಪರಾಕ್ರಮದ ವರ್ಣನೆಗಳಿರುವ ಎಷ್ಟೋ ಶಾಸನಗಳು ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಕಾಣಸಿಗುತ್ತವೆ. ಉದಾಹರಣೆಗಾಗಿ ಅಂತಹ ಒಂದೆರಡನ್ನು ಇಲ್ಲಿ ನೋಡಬಹುದು. ಕ್ರಿ.ಶ 9ನೇ ಶತಮಾನದ ಕಟ್ಟೆಮನುಗನಹಳ್ಳಿಯ ವೀರಗಲ್ಲು ಶಾಸನದ ಪ್ರಕಾರ ನೀತಿಮಾರ್ಗ ಪೆರ್ಮಾಡಿಯು ಆಳ್ವಿಕೆ ನಡೆಸುತ್ತಿರುವಾಗ ನುಗುನಾಡಿನ ಅಧಿಪತಿಯಾಗಿದ್ದವನು ಎರೆಯಪ್ಪರಸ. ಈತನು ನುಗುನಾಡು, ನವಿಲೆನಾಡನ್ನು ಆಳುತ್ತಿದ್ದಾಗ, ಬಯಲುನಾಡಿನ ಶತ್ರುಗಳು ಕೊತ್ತಮಂಗಲಕ್ಕೆ ಮುತ್ತಿಗೆ ಹಾಕಿದರು ಮತ್ತು ಯುದ್ಧದಲ್ಲಿ ಗೋವುಗಳನ್ನು ವಶಪಡಿಸಿಕೊಂಡರು. ಆಗ ಪೆರ್ವಯಲ (ಈಗಿನ

ಹೆಬ್ಬಲಗುಪ್ಪೆ) ಕೊಂಗುಣಿಯು ಶತ್ರುಗಳ ಮೇಲೆ ದಾಳಿ ಮಾಡಿ ಗೋವುಗಳನ್ನು ರಕ್ಷಿಸಿದನು. ಬಯಲ್ನಾಡಿನ ಶತ್ರುಗಳೊಂದಿಗೆ ಹೋರಾಡುತ್ತಿದ್ದಾಗ ಪೆರ್ಮಾನಡಿಗೌಡನ ಮಗನಾದ ರಾಮನು ವೀರಮರಣ ಹೊಂದಿದನು. ಅದಕ್ಕಾಗಿ ಪೆರ್ಮಾನಡಿ ಮತ್ತು ಎರೆಯಪ್ಪರಸರು ಸೇರಿ ಪೆರ್ಮಾನಡಿಗೌಡನಿಗೆ ಕೊಂಗುಣಿನಾಡ ನಾಡಗೌಡಿಕೆಯನ್ನು ನೀಡಿ ಕಿಟುವುಸುವೂರನ್ನು 'ಕಲ್ನಾಡು' ಕೊಟ್ಟರೆಂದು ಶಾಸನದಲ್ಲಿ ದಾಖಲಾಗಿದೆ. ಹೆಗ್ಗಡದೇವನಕೋಟೆ ತಾಲ್ಲೂಕಿನ ಅಂಕನಾಥಪುರದಲ್ಲಿರುವ ಒಂದನೇ ರಾಜೇಂದ್ರ ಚೋಳನ ಕ್ರಿ.ಶ.1037ರ ಶಾಸನವು ಚಂಗಾಳ್ವರಿಂದ ನೊಲೆನಾಡಿನ ಕೂಡಲೂರನ್ನು ಗೆದ್ದಾಗ ಪ್ರಾಯಶಃ ಆ ಯುದ್ಧದಲ್ಲಿ ಭಾಗಿಗಳಾದ ಪಿಳಿಂಗೆಯ ಅಜ್ಜುಣಗಾವುಂಡನ ಮಕ್ಕಳಾದ ಝೋಗಗವುಣ್ಡ ಅಂಕಗಾವುಣ್ಡ ಭವಗಾವುಣ್ಡ, ಚಾವಗಾವುಣ್ಡ ಭಸಗಾವುಣ್ಡ, ಕೇತಗಾವುಣ್ಡ ಮುಂತಾದವರಿಗೆ ಮಹಾದಂಡನಾಯಕ ಪಂಚವನ್‌ಮಾರಾಯನು (ಒಂದನೇ ರಾಜೇಂದ್ರ ಚೋಳ) ತನ್ನ 'ತೆಲುಗರ ಮಾರಿ' ಎಂಬ ಬಿರುದನ್ನು ನೀಡಿ ನಾಗಮಂಗಲವನ್ನು 'ಕಲ್ನಾಡು' ದತ್ತಿಯಾಗಿ ಕೊಟ್ಟು ಸತ್ಕರಿಸಿದನು. ಆ ಸಂದರ್ಭದಲ್ಲಿ ಪೆರ್ವಯಲಿನ ನಾಳ್ಗಾವುಂಡರೆಲ್ಲರೂ ಸೇರಿದ್ದರು. ಈ ಎರಡೂ ಶಾಸನಗಳಲ್ಲಿಯೂ ಕಲ್ನಾಡು ದತ್ತಿಯನ್ನು ಉಲ್ಲೇಖಿಸಿರುವುದನ್ನು ಕಾಣಬಹುದು. ಇಲ್ಲಿ ಕಲ್ನಾಡೆಂದರೆ ನಾಡಿನ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡುವವರ ಕುಟುಂಬದವರಿಗೆ ನೀಡಲಾಗುವ ನೆತ್ತರು ಕೊಡುಗೆ ಎಂದರ್ಥ. 'ಕಲ್ನಾಡು' ಎಂಬಲ್ಲಿ ನಾಡು ಎಂಬುದು ಪ್ರದೇಶವನ್ನೂ ಕಲ್ಲು ಎಂಬುದು ವೀರಗಲ್ಲನ್ನೂ ಸೂಚಿಸುವುದಿಲ್ಲವೆಂದೂ, ಅದು ದಾನಭೂಮಿಯ ಗಡಿಯ ಕಲ್ಲುಗಳನ್ನೂ, ಗಡಿಕಲ್ಲುಗಳ ಒಳಗಿನ ಭೂಮಿಯನ್ನು, ದಾನವನ್ನು ಸೂಚಿಸುತ್ತದೆಯೆಂದೂ ಡಾ.ಎಂ.ಚಿದಾನಂದಮೂರ್ತಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ಕೆ.ವಿ.ರಮೇಶ್‌ರವರು ಇದು ರುಧಿರಮಾನ್ಯ, ನೆತ್ತರುಗೈ, ರಕ್ತಮಾನ್ಯ, ನೆತ್ತರು ಕೊಡುಗೆ ಮುಂತಾದ ಪ್ರಯೋಗಗಳಿಗೆ ಸಂವಾದಿಯಾಗಿ ಬಳಸಿದ ಪದವೆಂದು ಸೂಚಿಸುತ್ತಾರೆ. ತಮಿಳು ಸಾಹಿತ್ಯ ಕೃತಿಗಳಲ್ಲಿ ಪದೇ ಪದೇ ಉಲ್ಲೇಖವಾಗುವ 'ನಾಟ್ಟುಕಲ್' ಎಂಬುದೇ ಕಾಲಾಂತರದಲ್ಲಿ ಅಕ್ಷರಪಲ್ಲಟವಾಗಿ, ನಾಟ್ಟುಕಲ್>ಕಲ್ಲನಾಟ್ಟು>ಕಲ್ನಾಟ್ಟು>ಕಲ್ನಾಟು>ಕಲ್ನಾಡು ಆಗಿರಬಹುದೆಂದು ಆರ್.ಶೇಷಶಾಸ್ತ್ರಿಯವರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆ ಸಮಾಜದಲ್ಲಿ ವೀರರು ತಮ್ಮ ಧೈರ್ಯ, ಸಾಹಸ, ತ್ಯಾಗಗುಣಗಳಿಂದ ಪ್ರಾಣವನ್ನೇ ಮುಡಿಪಿಟ್ಟು ಹೆಣ್ಣಿನ ಮಾನ–ಪ್ರಾಣ, ಜನಸಾಮಾನ್ಯರ ಜೀವ, ಆಸ್ತಿ–ಪಾಸ್ತಿ ಹಾಗೂ ಗೋವುಗಳನ್ನು ರಕ್ಷಿಸುವ ಸಂದರ್ಭದಲ್ಲಿ ಶತ್ರುಗಳೊಡನೆ ಹೋರಾಡಿ ಪ್ರಾಣತೆತ್ತರೆ, ಮತ್ತೊಂದು ಕಡೆ ಸತ್ತವೀರನ ಸ್ಮರಣಾರ್ಥವಾಗಿ ವೀರಗಲ್ಲನ್ನು ನಿಲ್ಲಿಸಿ ಅವರ ಕುಟುಂಬದವರಿಗೆ 'ಕಲ್ನಾಡು' ದತ್ತಿ ಕೊಡುವಲ್ಲಿ ಕೃತಜ್ಞತಾ ಭಾವವು ಹೊರಹೊಮ್ಮುತ್ತದೆ. ಇದೊಂದು ಸಾಮಾಜಿಕ ಮೌಲ್ಯದ ಸಂಕೇತವಾಗಿದ್ದು, ಮಹಾವೀರನಿಗೆ ಸಮಾಜವು ಕೃತಜ್ಞತಾಪೂರ್ವಕವಾಗಿ ಸಲ್ಲಿಸುತ್ತಿದ್ದ ಶ್ರದ್ಧಾಂಜಲಿಯೆಂದು ಹೇಳಬಹುದು.

ಅಂದಿನ ಸಮಾಜದಲ್ಲಿ ವೀರಗಲ್ಲುಗಳಿಗಿಂತ ಮಾಸ್ತಿಕಲ್ಲುಗಳು ಹೆಚ್ಚು ಪೂಜನೀಯ ಸ್ಥಾನವನ್ನು ಪಡೆದುಕೊಂಡಿದ್ದವು. ಅವುಗಳ ಮೇಲೆಯೇ ಜನರಲ್ಲಿ ಹೆಚ್ಚಿನ ಭಕ್ತಿ ಭಾವ ಇದ್ದುದಕ್ಕೆ ಕಾರಣವಿಲ್ಲದೇ ಇಲ್ಲ. ವೀರ ಮತ್ತು ಮಾಸ್ತಿಯರಿಬ್ಬರೂ ಧೀರರು ತ್ಯಾಗಿಗಳು. ಇವರಲ್ಲಿ ವೀರ ಆವೇಶದಿಂದ ಯುದ್ಧ ಮಾಡುತ್ತಿರುವಾಗ ಬೇರೆಯವರಿಂದ ಕೊಲೆಯಾಗುವನು. ಮಾಸ್ತಿ ತಾನೇ ಆತ್ಮಬಲಿ ಕೊಟ್ಟುಕೊಂಡವಳು. ಹೆಗ್ಗಡದೇವನಕೋಟೆ ತಾಲ್ಲೂಕಿನ ಬೆಳತೂರು ಗ್ರಾಮದ ಕ್ರಿ.ಶ 1057ರ ಶಾಸನವು ಮಹಾಸತಿಯೊಬ್ಬಳ ಅನುಪಮ ತ್ಯಾಗವನ್ನು ಕುರಿತು ಹೇಳುತ್ತದೆ. ಈ ಶಾಸನವು ಸುದೀರ್ಘವಾಗಿದ್ದು, ದೇಕಬ್ಬೆ ಶಾಸನವೆಂದೇ ಸುಪ್ರಸಿದ್ಧವಾಗಿದೆ. ದೇಕಬ್ಬೆ ನುಗುನಾಡಿನ ಅಧಿಪತಿ

ರವಿಗನ ಮಗಳು. ಅವಳನ್ನು ನವಲೆನಾಡಿನ ಅಧಿಪತಿ ಏಚ ಎಂಬಾತನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಅವರಿಬ್ಬರ ಬಾಳು ಸುಖಮಯವಾಗಿದ್ದಿತು. ಹೀಗಿರುವಾಗ, ಅವಳ ಗಂಡ ಏಚ ತನ್ನ ದಾಯಾದಿಗಳೊಡನೆ ಯುದ್ಧ ಮಾಡಿದಾಗ, ಸೆರೆಸಿಕ್ಕ ಅವನನ್ನು ತಲಕಾಡಿಗೆ ಒಯ್ದು ಕೊಂದರು. ಆ ವಿಷಯವನ್ನು ಕೇಳಿದ ಕ್ಷಣವೇ ದೇಕಬ್ಬೆ ಸಹಗಮನ ಮಾಡಲು ನಿರ್ಧರಿಸಿದಳು. ತಾಯಿ, ತಂದೆ, ಬಂಧುವರ್ಗ ಎಲ್ಲರೂ ಬಂದು 'ಬೇಡ ಬೇಡ' ಎಂದು ಕಾಲಿಗೆ ಬಿದ್ದು ಬೇಡಿಕೊಂಡರೂ, ತಾನು ಸಹಗಮನ ಮಾಡದಿದ್ದರೆ ತನ್ನನ್ನು ಹೆತ್ತ, ತಂದುಕೊಂಡ ಎರಡೂ ಮನೆಗಳಿಗೂ ಅಪಯಶಸ್ಸು ಬರುತ್ತದೆ ಎಂದು ಹೇಳಿ ಅಗ್ನಿಪ್ರವೇಶ ಮಾಡುತ್ತಾಳೆ. ಇಲ್ಲಿ ದೇಕಬ್ಬೆಯನ್ನು 'ರವಿಗನ ಕುಲದೀಪಕಿ, ಕುಲಪುತ್ರೆ' ಎಂದು ಕರೆದಿರುವುದು, ಎಲ್ಲರೂ ಬಂದು ಸಾಯಬೇಡವೆಂದು ಬೇಡಿಕೊಂಡಷ್ಟು ಅವಳ ನಿರ್ಧಾರ ದೃಢವಾದದ್ದು, ತಾನು ಉಳಿದರೆ ಎರಡು ಮನೆತನಗಳಿಗೂ ಅಪಕೀರ್ತಿ ಬರುತ್ತದೆ ಎಂಬ ಭಯ, ದೇವರಿಗೆ ಭೂಮಿ, ಚಿನ್ನ, ಪಶು, ಧನ ಇತ್ಯಾದಿಗಳನ್ನು ಬಿಟ್ಟುಕೊಟ್ಟು, ಕೈಯನ್ನು ಮುಗಿದುಕೊಂಡು ಅಗ್ನಿಪ್ರವೇಶ ಮಾಡಿದ್ದು ಇತ್ಯಾದಿಗಳೆಲ್ಲವೂ ಆ ಕಾಲದ ಸ್ತ್ರೀ ಸಮಾಜದಲ್ಲಿ ಮನೆಮಾಡಿದ್ದ ಆದರ್ಶಗಳನ್ನು ಅನಾವರಣ ಮಾಡುತ್ತವೆ. ಸಾಮಾನ್ಯವಾಗಿ ಕರ್ನಾಟಕದಲ್ಲಿ ಎಲ್ಲಿಯೂ ಒತ್ತಾಯದಿಂದ ಸಹಗಮನ ಮಾಡಿಸಿರುವ ನಿದರ್ಶನಗಳಿಲ್ಲ. ಸಹಗಮನವು ತನ್ನ ಗಂಡನ ಮೇಲಿನ ಭಕ್ತಿ, ಕೃತಜ್ಞತೆಗಳ ಸಂಕೇತಗಳಾಗಿ ಕಾಣುತ್ತವೆ. ತಾವು ಉದಾತ್ತವೆಂದು ನಂಬಿದ ಆದರ್ಶಕ್ಕಾಗಿ ಯಾವ ಹೆಣ್ಣು ಮಗಳು ತನ್ನನ್ನು ಆತ್ಮಾರ್ಪಣೆ ಮಾಡಿಕೊಂಡಳೋ ಆಕೆ ಸಾಮಾನ್ಯಳಲ್ಲ. ಆಕೆಯ ನಿಶ್ಚಲತೆ, ದೃಢನಿರ್ಧಾರ, ಶ್ರದ್ಧೆಗಳು ಗೌರವಾರ್ಹವಾದುವು. ಸತಿ ಆದವರು ನಮ್ಮ ಮನಸ್ಸನ್ನು ಕಲುಕುತ್ತಾರೆ. ಏಕೆಂದರೆ ಅವರು ಅತ್ಯುನ್ನತ ತ್ಯಾಗದ ಸಂಕೇತಗಳು.

ಶೌರ್ಯ, ತ್ಯಾಗ ಗುಣಗಳಂತಹ ನೈತಿಕ ಮೌಲ್ಯಗಳ ಜೊತೆಗೆ ಉಪಕಾರದ ಮನೋಭಾವನೆ ಅಂದಿನ ಸಾಮಾಜಿಕ ಜೀವನದಲ್ಲಿ ಹಾಸುಹೊಕ್ಕಾಗಿದ್ದಿತು ಎಂಬುದನ್ನು ಶಾಸನಗಳಿಂದ ತಿಳಿಯಬಹುದು. ವಿಜಯನಗರದ ಪ್ರೌಢಪ್ರತಾಪದೇವರಾಯನ ಕಾಲದಲ್ಲಿ ರಚಿತವಾದ (ಸು.1411) ಹಂಪೆಯ ಶಾಸನದಲ್ಲಿ ಬರುವ ಒಂದು ಪದ್ಯ, ಸಾಮಾಜಿಕ ಜೀವನಕ್ಕೆ ಹಿನ್ನೆಲೆಯಾಗಿರಬೇಕಾದ ಉದಾತ್ತ ಸಂಸ್ಕೃತಿಯನ್ನು ಅರ್ಥವತ್ತಾಗಿ ಸೂಚಿಸುತ್ತದೆ. ಪ್ರೌಢಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಅದರೊಂದಿಗೆ ಉದಾತ್ತ ವಿಚಾರದ ಸಂಸ್ಕೃತಿಯನ್ನು ರಕ್ತಗತವಾಗುವಂತೆ ಎರೆದಳೆಂಬುದನ್ನು ಶಾಸನ ಕವಿ ಈ ರೀತಿ ಹೇಳಿದ್ದಾನೆ.

> ***ಕೆಱೆಯಂ ಕಟ್ಟಿಸು, ಬಾವಿಯಂ ಸವಸು, ದೇವಾಗಾರಮಂ ಮಾಡಿಸ***
>
> ***ಜ್ಜೆಱೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್ ನಂದಿದ।***
>
> ***ರ್ಗೆಱೆವೆಟ್ಟಾಗಿರು, ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ***
>
> ***ಯೆಱೆದಳ್ಪಾಲೆಱೆವಂದುತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ॥***

ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯದಾತನಾಗು, ಸತ್ಪುರುಷರನ್ನು ರಕ್ಷಿಸು–ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಹಾಲನ್ನು ಎರೆದಳಂತೆ ಅವನ ತಾಯಿ! ಎಂತಹ ಅರ್ಥವತ್ತಾದ ಕಲ್ಪನೆ ಕವಿಯದು! ಲಕ್ಷ್ಮೀಧರಾಮಾತ್ಯನ ಎಲ್ಲ ಸತ್ಕಾರ್ಯಗಳ ಹಿಂದೆ ಆ ಮಹಾತಾಯಿಯ ಮಹದಾಶಯದ ಆಶೀರ್ವಾದ ಅಮೃತರೂಪದಲ್ಲಿ ರಕ್ತಗತವಾಗಿ ನಿಂತಿರಬೇಕೆಂದು

ಹೇಳಿದ ಕವಿ ನಮ್ಮ ಸಂಸ್ಕೃತಿಯ ತಿರುಳನ್ನೇ ಮುಂದೆ ಇಟ್ಟಿದ್ದಾನೆ. ಸಾಮಾಜಿಕ ಜೀವನದ ನೆಮ್ಮದಿಗೆ ಬೇಕಾದ ಮೂಲಭೂತವಾದ ಅಂಶಗಳನ್ನು ಈ ಮೇಲಿನ ಪದ್ಯ ಸೂಚಿಸುತ್ತದೆ.

ಕೆರೆ–ಕಟ್ಟೆ, ದೇವಾಲಯಗಳ ನಿರ್ಮಾಣ, ದಾನ, ದಾಸೋಹ ಮೊದಲಾದ ಸಮಾಜಹಿತ ಕಾರ್ಯಗಳಲ್ಲಿ ಜನರು ಉದಾತ್ತ ಮನೋಭಾವನೆಯನ್ನು ಮೈಗೂಡಿಸಿಕೊಂಡಿದ್ದರು. ಬಹುಶಃ ಸಾರ್ವಜನಿಕ ಕಾರ್ಯಗಳಲ್ಲೆಲ್ಲ ಬಹುಮುಖ್ಯವಾದುದು ಕೆರೆಗಳ ನಿರ್ಮಾಣ. ಸತ್ತವನ ಪ್ರೇತವು ಬಹಳ ಬಾಯಾರಿಕೆಯಿಂದ ಬಳಲುವುದೆಂದೂ, ತಟಾಕ ನಿರ್ಮಾಣ ಮುಂತಾದ ಧರ್ಮಕಾರ್ಯಗಳಿಂದ ಅದರ ಬಾಯಾರಿಕೆ ಹಿಂಗುವುದೆಂದೂ ಹಿಂದಿನ ಜನ ನಂಬಿದ್ದರೆಂದು ಕಾಣುತ್ತದೆ. ಮಹಾಭಾರತದ ಪ್ರಕಾರ ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು, ಮನುಷ್ಯರು ನೀರನ್ನು ಕುಡಿದು ತೃಪ್ತರಾಗುವವರೋ ಅದರ ಫಲವಾಗಿ ಅವನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ ಎಂದು ಹೇಳಲಾಗುತ್ತದೆ.

ಈ ನಂಬಿಕೆಗಳೇ ಅಂದಿನ ಸಮಾಜದಲ್ಲಿ ಅನೇಕ ಕೆರೆಕಟ್ಟೆಗಳ ರಚನೆಗೆ ಪ್ರೇರಣೆ ನೀಡಿದ್ದಿತೆಂದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಆಳ್ವಿಕೆ ಮಾಡಿದ ಪ್ರಾಚೀನ ಪುನ್ನಾಟ ಅರಸರು, ಗಂಗರು, ಬಯಲ್ನಾಡಿನ ಕದಂಬರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿ ಒಡೆಯರು, ಉಮ್ಮತ್ತೂರಿನ ಪಾಳೇಯಗಾರರು ಹಾಗೂ ಅನೇಕ ಸ್ಥಳೀಯ ಪ್ರಭುಗಳು, ಮಹಾದಂಡನಾಯಕರು, ದಂಡನಾಯಕರು ಕೆರೆಕಟ್ಟೆಗಳ ನಿರ್ಮಾಣ ಮತ್ತು ದೇವಾಲಯಗಳ ನಿರ್ಮಾಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ಕನ್ನಡಿಗರ ಔದರ್ಯ ಮುಖ್ಯವಾಗಿ ಪ್ರಕಟವಾಗಿರುವುದು ಎರಡು ಕಡೆ ಒಂದು, ದೇವಸ್ಥಾನ ನಿರ್ಮಾಣದಲ್ಲಿ; ಮತ್ತೊಂದು ಕೆರೆಗಳ ನಿರ್ಮಾಣದಲ್ಲಿ. ಇಂತಹ ಔದರ್ಯ ಗುಣವುಳ್ಳ ವ್ಯಕ್ತಿಗಳು ನಮ್ಮ ಪ್ರಾಚೀನ ಸಮಾಜದಲ್ಲಿ ಇದ್ದರೆಂಬುದಕ್ಕೆ ಶಾಸನಗಳೂ ನಿದರ್ಶನವಾಗಿ ನಿಲ್ಲುತ್ತವೆ. ಈ ಹಿನ್ನೆಲೆಯಲ್ಲಿ ತಗಡೂರ ಕೊವರ ಕೇತಗೌಡನು ಬಂದು ಆರಿದವಾಳಿಕೆಯ ಕೇತನಹಳ್ಳಿಯ ಮಾಡಿ ಮಲ್ಲಿನಾಥ ದೇವರ ದೇವಾಲಯ ಸಹಿತ ಹೊಸಕೆರೆಯನ್ನು ಕಟ್ಟಿಸಿದ ವಿಷಯವು ಹೆಗ್ಗಡದೇವನಕೋಟೆ ತಾಲ್ಲೂಕಿನ ಕ್ಯಾತನಹಳ್ಳಿ ಶಾಸನವೊಂದರಲ್ಲಿದೆ. ಕೆರೆಗಳ ನಿರ್ಮಾಣ ದೇವಸ್ಥಾನಗಳ ನಿರ್ಮಾಣದಂತೆ ಅತ್ಯಂತ ಪುಣ್ಯಕರವಾದ ಕೆಲಸವೆಂದು ಅಂದಿನ ಜನ ನಂಬಿದ್ದರಿಂದ ದೇವಾಲಯಗಳ ಜೊತೆಜೊತೆಗೆ ಕೆರೆಗಳನ್ನು ಸಹ ನಿರ್ಮಾಣ ಮಾಡುತ್ತಿದ್ದರು.

ಕ್ರಿ.ಶ 5ನೇ ಶತಮಾನದಿಂದ 10ನೇ ಶತಮಾನದವರೆಗೆ ಕನ್ನಡ ನೆಲದಲ್ಲಿ ಆಳ್ವಿಕೆ ಮಾಡಿದ ಗಂಗ ಅರಸರು ಕೆರೆಕಟ್ಟೆಗಳ ನಿರ್ಮಾಣ ಕಾರ್ಯಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದರು. ಗಂಗರ ಶಾಸನಗಳಲ್ಲಿ ಕೆರೆ, ಮಡುವು, ದೋಣಿ, ಗುಂಡು, ಕೊಳ ಮುಂತಾದ ನೀರಾವರಿಗೆ ಸಂಬಂಧಿಸಿದ ಹಲವು ಪದಗಳು ಉಲ್ಲೇಖವಾಗಿರುವುದನ್ನು ಕಾಣಬಹುದು. ಕ್ರಿ.ಶ 10ನೇ ಶತಮಾನದ ಬೆಳತೂರು ಶಾಸನದಲ್ಲಿ ಗಂಗ ಅರಸ ಬೂತುಗ ಕೊಂಗುಣಿಯು ನಿರ್ಮಿಸಿದ್ದ ಕೆರೆಯ ಮೇಲ್ವಿಚಾರಣೆಗಾಗಿ ಕಾಶ್ಯಪಗೋತ್ರದ ಮಾರಯ್ಯ ಗಾಮುಂಡನಿಗೆ ಹತ್ತು ಖಂಡುಗ ಭೂಮಿಯನ್ನು ಬಿತ್ತುವಟ್ಟವಾಗಿ ದಾನ ನೀಡಿರುವುದನ್ನುಉಲ್ಲೇಖಿಸುತ್ತದೆ. ಬಿ.ಆರ್.ಗೋಪಾಲ್ ಅವರು ಬಿತ್ತುವಟ್ಟವನ್ನು ವಿವರಿಸುತ್ತಾ, ಇದು ಕೆರೆಯನ್ನು ಕಟ್ಟಿಸಿದವರಿಗೆ, ಅದರ ಕಟ್ಟೆ ಕಾಲುವೆಗಳನ್ನು ರಕ್ಷಿಸುತ್ತಿದ್ದವರಿಗೆ ಪ್ರಾಚೀನ ಕಾಲದಲ್ಲಿ ನೀಡುತ್ತಿದ್ದ ಭೂದಾನವಾಗಿದ್ದು, ಇದಕ್ಕೆ ಬಿತ್ತುವಟ್ಟ ಎಂಬ ಹೆಸರು ಇದೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ಕೆರೆಗಾಗಿ ಊರಿನ ಜನರು ಬಿಡುತ್ತಿದ್ದ ಜಮೀನನ್ನು 'ಬಿತ್ತುವಟ್ಟ' ಎಂದು ಕರೆಯುತ್ತಿದ್ದರೆಂದು ಡಾ.ಎಂ.ಚಿದಾನಂದ ಮೂರ್ತಿಯವರು ಅಭಿಪ್ರಾಯ

ಪಟ್ಟಿದ್ದಾರೆ. ಹೀಗೆ ಕೆರೆಗಳ ನಿರ್ಮಾಣ ಹಾಗೂ ಅವುಗಳ ನಿರ್ವಹಣೆಗೆ ಬಿಡುತ್ತಿದ್ದ ಭೂದಾನ ಇವೆಲ್ಲವೂ ಪ್ರಾಚೀನ ಸಮಾಜದ ಅತ್ಯುತ್ತಮ ಮೌಲ್ಯಗಳೆಂದು ಪರಿಭಾವಿಸಬೇಕಾಗುತ್ತದೆ.

ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಆಳ್ವಿಕೆ ಮಾಡಿದ ಅನೇಕ ಸ್ಥಳೀಯ ಪ್ರಭುಗಳು ಸಹ ಕೆರೆಕಟ್ಟೆ, ದೇವಾಲಯಗಳ ನಿರ್ಮಾಣದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರೆಂಬುದು ಶಾಸನಗಳಿಂದ ತಿಳಿಯುತ್ತದೆ. ಕ್ರಿ.ಶ.1053ರ ಕಾಲಘಟ್ಟದ ಕೋಳಗಾಲ ಶಾಸನವು ನವಲೆನಾಡು ಕೋಳಗಾಲದ ದರಕುನ್ದನಾಡ ಉತ್ತಮ ಚೋಳಗಾವುಂಡನ ಮಗ ರಾಚಯ್ಯ ನಾಡಗಾವುಂಡರಾದಿತ್ಯ ಚೋಳಗಾವುಂಡ ಗಂಗೇಶ್ವರ ದೇವರ ಪ್ರತಿಷ್ಠೆಗೆಂದು ಊರಿನಿಂದ ಮುನ್ನೂರು ಗಜ ತವುದಹಳ್ಳಿಯ ಕೆರೆಯ ಕೆಳಗೆ ಬೆದ್ದಲು ಭೂಮಿಯನ್ನೂ, ದೇವರ ನಂದಾದೀವಿಗೆಗೆ ಗಾಣದೆಣ್ಣೆಯನ್ನು ದತ್ತಿ ನೀಡಿರುವುದನ್ನು ದಾಖಲಿಸುತ್ತದೆ.

ಇಮ್ಮಡಿ ಸಾಳುವ ನರಸಿಂಹನ ಆಳ್ವಿಕೆಯನ್ನು ಸೂಚಿಸುವ ಕ್ರಿ.ಶ.1493ರ ಕಾಲಘಟ್ಟದ ಶಾಸನವು ಮಲ್ಲನಾಯಕ ಮತ್ತು ತಿಪ್ಪಾಂಬ ಅವರ ಮಗ ನಾಗನಾಯಕನು ರಾಜನ ಆದೇಶದ ಮೇರೆಗೆ ಒಂದು ಕೆರೆಯನ್ನು ನಿರ್ಮಿಸಿ, ಆ ಪ್ರದೇಶದಲ್ಲಿ ವಿವಿಧ ವಿದ್ಯೆಗಳಲ್ಲಿ ಪಾರಂಗತರಾಗಿದ್ದ ನಲವತ್ತು ಬ್ರಾಹ್ಮಣರ ಒಂದು ಅಗ್ರಹಾರವನ್ನು ನೆಲೆಗೊಳಿಸಿದನು. ಆಗ ರಾಜನು ಮಣಿಯೂರ ಹೊನ್ನಯ್ಯನಹಳ್ಳಿ ಸ್ಥಳದಲ್ಲಿರುವ ಚಾಕೇನಹಳ್ಳಿಗೆ ಪ್ರತಿನಾಮದೇಯವಾದ ದೇಮಸಮುದ್ರ ಎಂಬ ಅಗ್ರಹಾರವನ್ನು ದಾನ ನೀಡಿದನು ಎಂದು ದಾಖಲಿಸುತ್ತದೆ. ಒಂದು ಅಗ್ರಹಾರ ಅಥವಾ ಬ್ರಾಹ್ಮಣ ಪಂಡಿತರ ಬೀಡನ್ನು ಸ್ಥಾಪಿಸಲು ಕೃಷಿಯೇತರ ಭೂಮಿಯನ್ನು ಅಥವಾ ಅಡವಿ ಭೂಮಿಯನ್ನು ವಹಿಸಿಕೊಟ್ಟು ಅಲ್ಲಿ ಕೆರೆ ತೋಡಿಸುವುದು ಅವರ ಆದ್ಯ ಕರ್ತವ್ಯವಾಗಿತ್ತು. ಮೊದಲು ಕೆರೆ ನಿರ್ಮಾಣ ಅನಂತರ ಅಗ್ರಹಾರ ಸ್ಥಾಪನೆ ಆ ಕಾಲದ ಸಮಾಜಹಿತ ಕಾರ್ಯಗಳಲ್ಲಿ ಒಂದಾಗಿತ್ತು. ಹೀಗೆ ನಿರ್ಮಾಣ ಮಾಡಿದ ಅಗ್ರಹಾರಗಳು ಪ್ರಾಚೀನ ಶಿಕ್ಷಣದ ಕೇಂದ್ರಗಳಾಗಿದ್ದವು. ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿ ವೇದಶಾಸ್ತ್ರ ಪಾರಂಗತರಾದ ಬ್ರಾಹ್ಮಣರಿಗೆ ದಾನ ನೀಡಿದರೆ ಪುಣ್ಯ ಲಭಿಸುವುದೆಂಬ ನಂಬಿಕೆಯ ಭಾವನೆಯಿಂದ ರಾಜರಾಣಿಯರು, ಅಧಿಕಾರಿಗಳು, ಶ್ರೀಮಂತರು, ವರ್ತಕರು ಅಗ್ರಹಾರಗಳ ನಿರ್ಮಾಣಕ್ಕೆ ಮುಂದಾಗುತ್ತಿದ್ದರು. ಇಂತಹ ಅಗ್ರಹಾರಗಳಲ್ಲಿ ಬ್ರಾಹ್ಮಣೇತರರಿಗೆ ಶಿಕ್ಷಣ ದೊರಕುತ್ತಿರಲಿಲ್ಲ. ವಿದ್ವಾಂಸರಿಗೆ, ಪಂಡಿತರಿಗೆ, ಉಪಾಧ್ಯಾಯರಿಗೆ ಹಾಗೂ ವಿದ್ಯಾರ್ಥಿ ವೃಂದಕ್ಕೆ ಹಲವಾರು ಸೌಲಭ್ಯಗಳನ್ನು ಒದಗಿಸಿಕೊಟ್ಟು, ಶಿಕ್ಷಣ ವ್ಯವಸ್ಥೆಯನ್ನು ಪ್ರೋತ್ಸಾಹಿಸಿದ ಅನೇಕ ಉಲ್ಲೇಖಗಳು ಹೆಗ್ಗಡದೇವನಕೋಟೆ ತಾಲ್ಲೂಕಿನ ಶಾಸನಗಳಲ್ಲಿ ಪ್ರಕಟವಾಗಿವೆ. ಕ್ರಿ.ಶ 1660ರ ಕಾಲಘಟ್ಟದ ಹೊರಮರಳಿ ಶಾಸನವು ಯುವರಾಜ ಕಂಠೀರವ, ಚಿಕ್ಕನಂಜುಂಡ ಭಟ್ಟರ ಮೊಮ್ಮಗನೂ ಸುಬ್ರಹ್ಮಣ್ಯರ ಪುತ್ರರೂ ಆದ ನಂಜುಂಡ ವಾರಾಣಾಸಿಗಳಿಗೆ ಹುಯಿಸಲನಾಡಿಗೆ ಸಲ್ಲುವ, ಕೊತ್ತಾಗಾಲಕ್ಕೆ ಸಲ್ಲುವ ಉಪಗ್ರಾಮ ಹೊರಮರಳಿಪುರ ಗ್ರಾಮವನ್ನು ಧಾರಾಪೂರ್ವಕವಾಗಿ ದತ್ತಿ ನೀಡಿದರೆಂದು ದಾಖಲಿಸಿದೆ. ಅಷ್ಟೇ ಅಲ್ಲದೆ ಸಾಗರೆ(ಚತುರ್ವೇದಿ ಮಂಗಲಂ), ಚಾಕೇನಹಳ್ಳಿ(ದೇಮಸಮುದ್ರ), ಹೊಳೆಬೀಚನಹಳ್ಳಿ(ದೇವರಾಜಪುರ), ತೋಟಹಳ್ಳಿ(ಗುಮ್ಮಟಾಪುರ), ಬೊಪ್ಪನಹಳ್ಳಿ(ಪೆರುಮಾಳಪುರ), ಎಡತೊರೆ(ಗೋಪಿನಾಥಪುರ), ಬಿಳಿಗುಂಬ(ಕಂಠೀರವಪುರ) ಮುಂತಾದ ಕಡೆಗಳಲ್ಲಿ ನಿರ್ಮಾಣವಾದ ಅಗ್ರಹಾರಗಳನ್ನು ಶಾಸನಗಳು ಉಲ್ಲೇಖಿಸಿವೆ. ಈ ಅಗ್ರಹಾರಗಳು ಅಂದಿನ ಸಮಾಜದಲ್ಲಿ ಹೆಸರಾಂತ ವಿದ್ಯಾಕೇಂದ್ರಗಳಾಗಿ ಪರಿಣಮಿಸಿದ್ದವು. ಈ ಹಿನ್ನೆಲೆಯಲ್ಲಿ ಅಂದಿನ ಸಮಾಜವು ಶೈಕ್ಷಣಿಕವಾಗಿಯೂ ಸುಭಿಕ್ಷವಾಗಿತ್ತೆಂದು ಹೇಳಬಹುದು.

ಪ್ರಾಚೀನ ಕರ್ನಾಟಕದ ಮೌಲ್ಯಗಳಲ್ಲಿ ಪ್ರಮುಖವಾದಂತಹವು ಶೌರ್ಯ ಮತ್ತು ತ್ಯಾಗ. ಇವುಗಳಲ್ಲಿ ಒಂದಾದ ತ್ಯಾಗ ವ್ಯಕ್ತವಾಗುವುದು, ದಾನ ಕಾರ್ಯಗಳ ಮೂಲಕ. ಇಂತಹ ತ್ಯಾಗ ವೀರರ ಚರಿತ್ರೆಯೇ ಕರ್ನಾಟಕದ ಚರಿತ್ರೆ ಎನ್ನಬಹುದು. ಈ ತ್ಯಾಗ ವೀರರು ರಾಜರು, ಅಧಿಕಾರಿಗಳು, ದಂಡನಾಯಕರು, ಶ್ರೀಮಂತರು, ವರ್ತಕರು ಮೊದಲಾದವರಾಗಿದ್ದರು.

ಪ್ರಾಚೀನ ಸಮಾಜದ ಪ್ರಮುಖ ಮೌಲ್ಯಗಳಲ್ಲಿ ದಾನ ನೀಡುವುದು ಒಂದಾಗಿದ್ದು, ಕೊಟ್ಟಂತಹ ದಾನವು ಚಿರಸ್ಥಾಯಿಯಾಗಿ ಉಳಿಯಲೆಂದು ಅದನ್ನು ಶಾಸನಗಳಲ್ಲಿ ಬರೆಯಿಸುತ್ತಿದ್ದರು. ಅಂತಹ ಅನೇಕ ದಾನ ಶಾಸನಗಳನ್ನು ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಕಾಣಬಹುದು. ಕ್ರಿ.ಶ 16ನೇ ಶತಮಾನದ ಗುಡುಮಹಳ್ಳಿ ಶಾಸನವೊಂದು ಮಲ್ಲರಸಯ್ಯನವರಿಗೆ ಧರ್ಮವಾಗಲೆಂದು ಮಲ್ಲರಸ ಅಯ್ಯನವರು ಮಟಕೆರೆಯ ರಾಮೇಶ್ವರ ದೇವರ ಅಂಗಭೋಗ ರಂಗಭೋಗ ಮೊದಲಾದ ವೈಭವಕ್ಕೆ ಗುಡುಮಿಹಳ್ಳಿ ಗ್ರಾಮವನ್ನು ದತ್ತಿ ನೀಡಿದ ವಿಷಯವನ್ನು ದಾಖಲಿಸಿದೆ. ಕ್ರಿ.ಶ 15–16ನೇ ಶತಮಾನದ ಹಯಿರಿಗೆ ಶಾಸನದಲ್ಲಿ ನರಸಣ್ಣನಾಯಕರಿಗೆ ಧರ್ಮವಾಗಲೆಂದು ತಿಪ್ಪರಸರು ಮಟಕೆರೆಯ ರಾಮಯ್ಯ ದೇವರಿಗೆ ಸರ್ವಮಾನ್ಯವಾಗಿ ಹಯಿರಿಗೆ ಗ್ರಾಮವನ್ನು ದತ್ತಿಬಿಟ್ಟ ವಿಷಯವು ದಾಖಲಾಗಿದೆ. ಅಷ್ಟೇ ಅಲ್ಲದೆ ಈ ದಾನವನ್ನು ಕೆಡಿಸಿದರೆ ಗಂಗೆಯ ತಡಿಯಲಿ ಬ್ರಾಹ್ಮಣರ ಕೊಂದ ದೋಷಕ್ಕೆ ಹೋಗುವರು ಎಂದು ಶಾಸನವನ್ನು ಬರೆಸಿದ್ದಾರೆ. ಪ್ರಾಚೀನ ಸಮಾಜದಲ್ಲಿ ದಾನ ಕೊಡುವುದರ ಜೊತೆಗೆ ಆ ದಾನವನ್ನು ಅಪಹರಿಸಿದವರಿಗೆ ಒದಗಬಹುದಾದ ಪಾಪಗಳನ್ನು, ದಾನಗಳನ್ನು ಕಾಪಾಡಿದವರಿಗೆ ಉಂಟಾಗಬಹುದಾದ ಪುಣ್ಯಗಳನ್ನು ಶಾಪಾಶಯಗಳ ರೂಪದಲ್ಲಿ ಬರೆಸುತ್ತಿದ್ದುದನ್ನು ಶಾಸನಗಳಲ್ಲಿ ಗಮನಿಸಬಹುದು.

ಕನ್ನಡದಲ್ಲಿ ಉಕ್ತವಾಗಿರುವ ಶಾಪಾಶಯಗಳು ಬಹಳ ಸರಳವಾಗಿ ಸ್ಥಳಿಯರಿಗೆ ಅರ್ಥವಾಗುವಂತೆಯೂ ಪರಿಣಾಮಕಾರಿಯಾಗಿಯೂ ಇರುತ್ತಿದ್ದವು. ಆ ಶಾಪಾಶಯಗಳು 'ಇದಾನ್ ಅಪಹರಿಸಿದವರಿಗೆ ಗಂಗೆಯ ತಡಿಯಲು ಗೋವ ಬ್ರಾಂಮಣನ ಕೊಂದ ಪಾಪಕ್ಕೆ ಹೋಹರು ವಾರಣಾಸಿಯ ತಡಿಯಲಿ ಕಪುಲೆಯ ಕೊಂದ ದೋಸಕ್ಕೆ ಹೋಹರು' ಎಂದೂ, 'ಯಿಗ್ರಾಮಕ್ಕೆ ತಪ್ಪಿ ಅಳುಪಿದವರಿಗೆ ಗಂಗೆಯ ತಡಿಯಲಿ ಗೋವು ಬ್ರಾಹ್ಮಣರ ಕೊಂದ ದೋಸಕ್ಕೆ ಹೋಹರು' ಎಂದೂ ಇನ್ನೂ ಮುಂತಾಗಿ ಇರುತ್ತಿದ್ದವು. ನಮ್ಮ ಪ್ರಾಚೀನ ಸಮಾಜ ಧರ್ಮಕ್ಕೆ ಹೆಚ್ಚಾಗಿ ಅಂಟಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಶಾಪಾಶಯಗಳನ್ನು ಸ್ಮೃತಿ ಪುರಾಣಾದಿಗಳಿಂದ ಉದ್ಧರಿಸಿ ಕೊಟ್ಟಿರುವುದನ್ನು ಕಾಣಬಹುದು. ಪ್ರಸಿದ್ಧ ತೀರ್ಥಕ್ಷೇತ್ರವೂ, ಶಿವನ ಆವಾಸ ಸ್ಥಾನವೂ ಆದ ವಾರಣಾಸಿ ಹಾಗೂ ಗಂಗಾನದಿ ಹಿಂದೂಗಳ ಪವಿತ್ರ ಸ್ಥಳಗಳಾಗಿದ್ದವು. ಅಂದಿನ ಸಮಾಜ ಬಾಲವಧೆ, ಸ್ತ್ರೀವಧೆ, ಬ್ರಾಹ್ಮಣವಧೆ, ಗೋವಧೆ ಮತ್ತು ಋಷಿವಧೆ ಪಂಚಮಹಾಪಾತಕಗಳೆಂದು ಭಾವಿಸಿದ್ದಿತು. ಈ ಹಿನ್ನೆಲೆಯಲ್ಲಿ ಪವಿತ್ರ ಕ್ಷೇತ್ರಗಳಾದ ಗಂಗೆಯ ತಡಿಯಲಿ, ವಾರಣಾಸಿಯ ತಡಿಯಲಿ ಗೋವುಗಳನ್ನು, ಬ್ರಾಹ್ಮಣರನ್ನು ಕೊಂದರೆ ಒದಗಬಹುದಾದ ಪಾಪದ ಭೀಕರತೆಯನ್ನು ಇಲ್ಲಿ ಒತ್ತಿ ಹೇಳಿ ದಾನವನ್ನು ನಾಶ ಮಾಡಬಾರದೆಂಬ ನೈತಿಕ ಎಚ್ಚರಿಕೆಯನ್ನು ಶಾಸನಗಳಲ್ಲಿ ನೀಡಿರುವುದನ್ನು ಗಮನಿಸಬಹುದು. ಈ ನಿಟ್ಟಿನಲ್ಲಿ ಶಾಪಾಶಯಗಳು ಮೌಲ್ಯಯುತ ಸಮಾಜ ನಿರ್ಮಾಣ ಮಾಡುವ ದಿಶೆಯಲ್ಲಿ ಕೆಲಸ ಮಾಡಿವೆ. ದಾನವನ್ನು ಮಾಡಿದವನಿಗಿಂತ ಮಾಡಿದ ದಾನವನ್ನು ಕಾಯ್ದುಕೊಂಡು ಬಂದವನೇ ದಾನವನ್ನು ಮಾಡಿದಂತೆ ಎಂಬ ನಿರಂಹಭಾವ ಪ್ರಾಚೀನ ಸಮಾಜದಲ್ಲಿ ಮನೆ ಮಾಡಿದ್ದರಿಂದಲೇ ಇಂತಹ ಶಾಪಾಶಯಗಳು ಹುಟ್ಟಿವೆಯೆಂದು ಹೇಳಬಹುದು.

ಪ್ರಾಚೀನ ಸಮಾಜದ ಪ್ರಮುಖ ಮೌಲ್ಯಗಳಲ್ಲಿ ದಾಸೋಹವೂ ಒಂದಾಗಿದ್ದು, ದಾಸೋಹ ಕಾರ್ಯಗಳನ್ನು ನಡೆಸಿದ ಅನೇಕ ನಿದರ್ಶನಗಳು ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖವಾಗಿವೆ. ಕ್ರಿ.ಶ 1020ರ ಕಾಲಘಟ್ಟದ ಬೆಳತೂರು ಶಾಸನವು ಬೆಳತೂರು ದೇವಾಲಯದ ನವೀಕರಣದ ಜೊತೆಗೆ ನಲ್ಲಮುರುಗಶೆಟ್ಟಿ ಮತ್ತು ಮಾಗಬ್ಬೆಯರ ಮಗ ಬಸವಶೆಟ್ಟಿಯು ರುದ್ರಹೋಮವನ್ನೂ ಸಹಸ್ರ ಭೋಜನವನ್ನು ಮಾಡಿಸಿ, ದೇವಾಲಯದ ಶಾಶ್ವತ ನಂದಾದೀಪಕ್ಕೆಂದು ಭೂಮಿಯನ್ನು ದತ್ತಿ ಬಿಟ್ಟ ವಿಷಯವನ್ನು ದಾಖಲಿಸುತ್ತದೆ. ಗಂಗ ದೊರೆ ಶ್ರೀಪುರುಷನ ಆಳ್ವಿಕೆಯ ಕಾಲದ ಮತ್ತೊಂದು ಶಾಸನ, ಶ್ರೀಪುರುಷ ಮಹಾರಾಜನು ಕೆಸುಗೊಳದ ಒಡೆಯನಾದ ಬಿಣಾಮ್ಮನಿಗೆ ತನ್ನ ಜನ್ಮ ನಕ್ಷತ್ರದ ದಿನದಿಂದ ಒಂದು ತಿಂಗಳವರೆಗೆ 12 ಜನ ಬ್ರಾಹ್ಮಣರಿಗೆ ಒಪ್ಪೊತ್ತಿನ ಭೋಜನಕ್ಕಾಗಿ ದಣ್ಣಿಗವಾಡಿ ಎಂಬ ಗ್ರಾಮವನ್ನು ಬ್ರಹ್ಮದೇಯವಾಗಿ ಕೊಟ್ಟನೆಂಬ ಸ್ವಾರಸ್ಯಕರವಾದ ಸಂಗತಿಯನ್ನು ದಾಖಲಿಸಿದೆ. ಈ ಹಿನ್ನೆಲೆಯಲ್ಲಿ ಹೆಗ್ಗಡದೇವನ ಕೋಟೆ ತಾಲೂಕಿನಲ್ಲಿ ಆಳ್ವಿಕೆ ನಡೆಸಿದ ಪ್ರಾಚೀನ ರಾಜಮನೆತನಗಳ ಅರಸರು, ಅಧಿಕಾರಿಗಳು ಅಲ್ಲದೆ ವರ್ತಕರು, ಶ್ರೀಮಂತರು ದಾನ, ದಾಸೋಹಗಳಂತ ಪುಣ್ಯ ಕಾರ್ಯಗಳನ್ನು ಮಾಡುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ.

ಒಟ್ಟಾರೆ ನಮ್ಮ ಪ್ರಾಚೀನ ಸಮಾಜದಲ್ಲಿ ಮನೆಮಾಡಿದ್ದ ತ್ಯಾಗ, ಶೌರ್ಯ, ಉಪಕಾರ ಭಾವನೆ, ದಾನ, ದಾಸೋಹದಂತಹ ನೈತಿಕ ಮೌಲ್ಯಗಳ ಜೊತೆಗೆ ಸಮಾಜಹಿತ ಕಾರ್ಯಗಳನ್ನು ಅರಿಯಲು ಶಾಸನಗಳು ಮಹತ್ತರ ಆಧಾರಗಳಾಗಿವೆ. ಶಾಸನಗಳನ್ನು ಹೆಚ್ಚು ವಿವರವಾಗಿ ಮತ್ತು ಅನೇಕ ದೃಷ್ಟಿಗಳಿಂದ ಅಭ್ಯಾಸ ಮಾಡಿದಂತೆಲ್ಲಾ ಸಾಮಾಜಿಕ ಜೀವನದ ವಿವಿಧ ಮುಖಗಳು ಇನ್ನೂ ಸ್ಪಷ್ಟವಾದ ರೂಪವನ್ನು ಪಡೆಯಲು ಸಹಾಯಕವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- *ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ-3.* (1974). ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಚಿದಾನಂದಮೂತಿ, ಎಂ. (1966). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150).* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಚಿದಾನಂದಮೂರ್ತಿ,ಎಂ. (1984). *ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು.* ಐಬಿಚ್ ಪ್ರಕಾಶನ.
- ಕಲ್ಬುರ್ಗಿ, ಎಂ.ಎಂ. (1980). *ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು.* ಐಬಿಹೆಚ್ ಪ್ರಕಾಶನ.
- ಕುಮಾರಸ್ವಾಮಿ, ತಾ.ನಂ. (2023). *ಕರ್ನಾಟಕದಲ್ಲಿ ಚೋಳರ ಕನ್ನಡ ಶಾಸನಗಳು.* ವಿಗ್ನಾನ್ ಪ್ರಕಾಶನ.
- ಮಂಜುನಾಥ್, ಸಿ.ಯು. (2012). *ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ (ಕ್ರಿ.ಶ.1150–1340),* ಚಿತ್ಕಲಾ ಪ್ರಕಾಶನ.
- ಪಂಚಮುಖಿ, ಆರ್.ಎಸ್. (1981). *ಕನ್ನಡ ನಾಡಿನ ಶಾಸನಗಳು.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಪರಶಿವಮೂರ್ತಿ, ಡಿ.ವಿ. (1999). *ಕನ್ನಡ ಶಾಸನ ಶಿಲ್ಪ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–1999
- ಶೇಷಶಾಸ್ತ್ರಿ, ಆರ್. (1982). ಕರ್ನಾಟಕದ ವೀರಗಲ್ಲುಗಳು. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ.
- ತಿಪ್ಪೇರುದ್ರಸ್ವಾಮಿ, ಎಚ್.(1968). *ಕರ್ನಾಟಕ ಸಂಸ್ಕೃತಿ ಸಮೀಕ್ಷೆ.* ಡಿ.ವಿ.ಕೆ ಮೂರ್ತಿ.